**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 603/2022**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿತರು
1. ಜಿ.ಶೇಖರ ಬಿನ್ ಗೋಪಾಲನಾಯಕ, 53 ವರ್ಷ,
2. ಕೊಂಗಳನಾಯಕ ಬಿನ್ ಗೋಪಾಲನಾಯಕ, 30 ವರ್ಷ,
3. ಕುಮಾರ ಬಿನ್ ರಾಚನಾಯಕ, 28 ವರ್ಷ,
4. ನಾಗನಾಯಕ ಬಿನ್ ಬೆಳ್ಳನಾಯಕ, 70 ವರ್ಷ,
5. ಶಿವಪ್ಪ ಬಿನ್ ಚಿಕ್ಕಂಡನಾಯಕ, 25 ವರ್ಷ,
6. ಮಹೇಶ ಬಿನ್ ಲಿಂಗನಾಯ್ಕ, 28 ವರ್ಷ,
7. ಮಹೇಶ ಬಿನ್ ಸುಬ್ಬನಾಯಕ, 34 ವರ್ಷ,
8. ಗೋಪಾಲನಾಯಕ ಬಿನ್ ಗಿರಿಯಪ್ಪ, 48 ವರ್ಷ,
9. ದೊಡ್ಡಬಸವನಾಯಕ ಬಿನ್ ಮಡಿಕೆರಾಚನಾಯಕ, 65 ವರ್ಷ,
10. ಬಸವಣ್ಣ ಬಿನ್ ನಿಂಗನಾಯಕ, 26 ವರ್ಷ,

ಎಲ್ಲಾರ ವಾಸಃ ಬೊಮ್ಮಲಾಪುರ ಗ್ರಾಮ,
ಗುಂಡ್ಲುಪೇಟೆ ತಾಲ್ಲೂಕು.

## ದೋಷಾರೋಪಣೆ

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದ ನ್ಯಾದಂಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 14.02.2022 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಬೊಮ್ಮಲಾಪುರ ಗ್ರಾಮ ಅಂಗಡಿ ಬೀದಿಯಲ್ಲಿರುವ ಚಾಸಾ–1 ಗೋವಿಂದರಾಜು ರವರ ಬಾಬ್ತು ಹಣ್ಣಿನ ಅಂಗಡಿಗೆ ಆರೋಪಿಗಳಾದ ನೀವು ಹಳೇಯ ದ್ವೇಷದಿಂದ ಏಕೋದ್ದೇಶದಿಂದ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಭಾ ದಂ ಸಂ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ, ಸಮಯದಂದು ಆರೋಪಿತರಾದ ನೀವುಗಳು ಏಕೋದ್ದೇಶದಿಂದ ವಿಧಿ ವಿರುದ್ಧ ಕೂಟದ ಸದಸ್ಯರಾಗಿ ದೊಂಬಿ ಮಾಡಿದ್ದು, ಆ ಮೂಲಕ ಭಾ ದಂ ಸಂ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ ಮೇಲ್ಕಂಡ, ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಗೋವಿಂದರಾಜು ರವರ ಬಾಬ್ತು ಹಣ್ಣಿನ ಅಂಗಡಿಗೆ ನುಗ್ಗಿ ಹಣ್ಣುಗಳನ್ನು ಚೆಲ್ಲಿ ಬೋಳಿಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದು, ಆ ಮೂಲಕ ಭಾ ದಂ ಸಂ ಕಲಂ **504** ಸಹವಾಚಕ ಕಲಂ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ ಮೇಲ್ಕಂಡ, ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಗೋವಿಂದರಾಜು ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಚಾಸಾ-1 ಗೋವಿಂದರಾಜು ರವರ ಅಂಗಡಿಯಲ್ಲಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು ಆಶ್ರಯ ಯೋಜನೆಯ ಅಡಿ ನೀಡಿರುವ ಸೈಟುಗಳಿಗೆ ಎಸ್.ಸಿ. ಬೀದಿ ಜನಾಂಗದ ಬೀದಿಯವರಿಗೆ ದಾರಿ ಬಿಡಿಸಲು ನೀನು ಯಾರು ಎಂದು ಚಾಸಾ-1 ಗೋವಿಂದರಾಜು ರವರಿಗೆ 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾ ದಂ ಸಂ ಕಲಂ **324** ಸಹವಾಚಕ ಕಲಂ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಐದನೇಯದಾಗಿ ಮೇಲ್ಕಂಡ, ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಗೋವಿಂದರಾಜು ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಗಳಿಂದ ಕತ್ತಿಗೆ ಹೊಡೆದು ಬಟ್ಟೆಯನ್ನು ಹಿಡಿದು ಎಳೆದಾಡಿದ್ದು, ಆ ಮೂಲಕ ಭಾ ದಂ ಸಂ ಕಲಂ **323** ಸಹವಾಚಕ ಕಲಂ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಕೊನೇಯದಾಗಿ ಮೇಲ್ಕಂಡ, ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಗೋವಿಂದರಾಜು ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಜಗಳ ಬಿಡಿಸಲು ಬಂದ ಚಾಸಾ-2 ಕೃಷ್ಣನಾಯಕ ರವರಿಗೆ ಚಾಕುವಿನಿಂದ ಚುಚ್ಚಿ ಸಾಯಿಸುತ್ತೇವೆಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾ ದಂ ಸಂ ಕಲಂ **506** ಸಹವಾಚಕ ಕಲಂ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ